ದಿನಾಂಕಃ 14.08.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಪಾಟಿ ಸವಾಲುಃ ವಾದಿ ಪರ ಶ್ರೀ ಜಿ ಎಂ ಪಿ ವಕೀಲರಿಂದ.

ನಾನು ಮಾಹಿತಿ ಶಿಕ್ಷಣ ಸಂಯೋಜಕ ಎಂದು ತಾಲ್ಲೂಕ ಪಂಚಾಯತಿಯಲ್ಲಿ ಕೆಲಸ ಮಾಡುತ್ತೇನೆ. ನಾವು ಹಿಂದೂ ವಾಲ್ಮಿಕಿ ಜಾತಿಗೆ ಸೇರಿದವರು ಅಂದರೆ ಸರಿ. ನನ್ನ ತಂದೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಚೆನ್ನಾಗಿರುತ್ತಾರೆಂದರೆ ಸಾಕ್ಷಿ ಈಗ ನನ್ನ ತಂದೆ ಪಾರ್ಶ್ವವಾಯುದಿಂದ ಬಳಲುತ್ತಿದ್ದಾರೆ ಎನ್ನುತ್ತಾರೆ. ನನ್ನ ಅಜ್ಜ ಪಟೇಲ್ ಹನುಮಂತಪ್ಪನಿಗೆ ತಾಯಿ ಮಾತ್ರ ಇದ್ದರು ತಂದೆ ಯಾರು ಎಂದು ಗೊತ್ತಿಲ್ಲ ಅಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಅಜ್ಜನ ಎಲ್ಲಾ ದಾಖಲಾತಿಗಳಲ್ಲಿ ತಾಯಿ ಬಗ್ಗೆ ಮಾತ್ರ ಉಲ್ಲೇಖ ಇರುತ್ತದೆ ತಂದೆ ಬಗ್ಗೆ ಉಲ್ಲೇಖ ಇರುವುದಿಲ್ಲ ಅಂದರೆ ನನಗೆ ಗೊತ್ತಿಲ್ಲ. ನಿಮ್ಮ ಮತ್ತು ಪ್ರತಿವಾದಿಗಳ ಕುಟುಂಬದ ಇತಿಹಾಸದ ಬಗ್ಗೆ ನಿಮಗೆ ಮಾಹಿತಿ ಇರುತ್ತದೆಯಾ ಅಂದರೆ ಸಾಕ್ಷಿ ನಮ್ಮ ಕುಟುಂಬದ ಇತಿಹಾಸದ ಬಗ್ಗೆ ಮಾಹಿತಿ ಇರುತ್ತದೆ ಎನ್ನುತ್ತಾರೆ. ನನ್ನ ತಂದೆ ಸಲ್ಲಿಸಿದ ಪ್ರತಿವಾದಪತ್ರದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಅಂದರೆ ಸರಿಯಲ್ಲ. ಪಟೇಲ್ ಹನುಮಂತಪ್ಪನವರು ಯಾವಾಗ ಮರಣ ಹೊಂದಿರುತ್ತಾರೆಂದರೆ ಸಾಕ್ಷಿ 1980 ರಲ್ಲಿ ಎನ್ನುತ್ತಾರೆ. ಪಟೇಲ್ ಹನುಮಂತಪ್ಪ ದೀರ್ಘಕಾಲ ಬಾಳಿ ಸ್ವಾಬಾವಿಕ ಸಾವು ಹೊಂದಿರುತ್ತಾರೆಂದರೆ ಸರಿ. ಪಟೇಲ್ ಹನುಮಂತಪ್ಪರವರ ಕಾಲದಲ್ಲಿ ಅವರ ಕುಟುಂಬ ಸುಶಿಕ್ಷಿತ ಕುಟುಂಬ ಅಂದರೆ ಸಾಕ್ಷಿ ಮಾಹಿತಿ ಇಲ್ಲ ಎನ್ನುತ್ತಾರೆ. ಪಟೇಲ್ ಹನುಮಂತಪ್ಪ ಶಾನಭೋಗರ ಕೈ ಕೆಳಗೆ 5-6 ಹಳ್ಳಿಗಳ ಕಂದಾಯ ವಸೂಲಿ ಮಾಡುತ್ತಿದ್ದರು ಅಂದರೆ ಸಾಕ್ಷಿ ಮಾಹಿತಿ ಇಲ್ಲ ಎನ್ನುತ್ತಾರೆ. ಊರಲ್ಲಿ ಏನಾದರೂ ಜಗಳ ಅಥವಾ ಸಮಸ್ಯೆ ಉದ್ಭವಿಸಿದರೆ ಜನರು ಪಟೇಲ್ ಹನುಮಂತಪ್ಪರವರ ಸಮಕ್ಷಮ ಬಗೆಹರಿಸಿಕೊಳ್ಳುತಿದ್ದರು ಅಂದರೆ ಸಾಕ್ಷಿ ಮಾಹಿತಿ ಇಲ್ಲ ಎನ್ನುತ್ತಾರೆ. ಪಟೇಲ್ ಹನುಮಂತಪ್ಪರವರಿಗೆ ಗನ್ ಲೈಸೆನ್ಸನ್ನು ಸರ್ಕಾರದಿಂದ ಕೊಡಲಾಗಿತ್ತು ಅಂದರೆ ಸರಿ. ಪಟೇಲ್ ಹನುಮಂತಪ್ಪರವರು ಸುಶಿಕ್ಷಿತರು ಮತ್ತು ಬುದ್ದಿವಂತರು ಇದ್ದರು ಅಂದರೆ ಸರಿ. ಪಟೇಲ್ ಹನುಮಂತಪ್ಪರವರ ಹೆಂಡತಿಯ ಹೆಸರು ನಾಗಮ್ಮ ಅಂದರೆ ಸರಿ. ಪಟೇಲ್ ಹನುಮಂತಪ್ಪ ಮರಣ ಹೊಂದಿದ ನಂತರ ನಾಗಮ್ಮ ಮರಣ ಹೊಂದಿರುತ್ತಾರೆ ಅಂದರೆ ಸರಿ. ಪಟೇಲ್ ಹನುಮಂತಪ್ಪರವರಿಗೆ 4 ಜನ ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳು ಅಂದರೆ ಸರಿ. ನನ್ನ ತಂದೆ ಬಿ ಜಿ ಬಸವಂತಪ್ಪ ಪಟೇಲ್ ಹನುಮಂತಪ್ಪನ ಹಿರಿಯ ಮಗ ಅಂದರೆ ಸರಿ. ನನ್ನ ತಂದೆ

ಆತನ ಸಹೋದರ ಮತ್ತು ಸಹೋದರಿಯರಿಗಿಂತ ಬುದ್ದಿವಂತರು ಇದ್ದರು ಅಂದರೆ ಸಾಕ್ಷಿ ಸಾಧಾರಣ ಬುದ್ದಿವಂತರು ಇದ್ದರು ಎನ್ನುತ್ತಾರೆ. ನನ್ನ ತಂದೆ ಊರಿನ ಮುಖಂಡರಾಗಿ ಕೆಲಸ ಮಾಡುತ್ತಿದ್ದರು ಅಂದರೆ ಸರಿ. ನನ್ನ ತಂದೆ ಹುಟ್ಟಿದಾಗಿನಿಂದ ಇಲ್ಲಿಯವರೆಗೂ ಬೆಲವಂತನಕೊಪ್ಪ ಗ್ರಾಮದಲ್ಲಿ ವಾಸ ಇರುತ್ತಾರೆ ಅಂದರೆ ಸರಿಯಲ್ಲ. ನಿಮ್ಮ ತಂದೆ ಎಷ್ಟು ವರ್ಷಗಳಿಂದ ಬೆಲವಂತನಕೊಪ್ಪ ಗ್ರಾಮದಲ್ಲಿ ವಾಸ ಇರುತ್ತಾರೆ ಅದಕ್ಕೂ ಪೂರ್ವದಲ್ಲಿ ಎಲ್ಲಿ ವಾಸ ಇದ್ದರು ಅಂದರೆ ಸಾಕ್ಷಿ ಮೊದಲು ಎಲಿವಾಳ ಗ್ರಾಮದಲ್ಲಿ ವಾಸ ಇದ್ದರು ನಂತರ ಈಗ 65 ವರ್ಷಗಳಿಂದ ಬೆಲವಂತನಕೊಪ್ಪ ಗ್ರಾಮದಲ್ಲಿ ವಾಸ ಇರುತ್ತಾರೆ ಎನ್ನುತ್ತಾರೆ. ನಿಮ್ಮ ತಂದೆ ಎಷ್ಟು ವರ್ಷದವರಿದ್ದಾಗ ಎಲಿವಾಳ ಗ್ರಾಮಕ್ಕೆ ಹೋಗಿರುತ್ತಾರೆ ಅಂದರೆ ಸಾಕ್ಷಿ 12 ವರ್ಷದವರಿದ್ದಾಗ ಹೋಗಿರುತ್ತಾರೆ ನಂತರ ಮರು ವರ್ಷದಲ್ಲಿಯೇ ಬೆಲವಂತನಕೊಪ್ಪ ಗ್ರಾಮಕ್ಕೆ ಬಂದಿರುತ್ತಾರೆ ಎನ್ನುತ್ತಾರೆ. ಎಲಿವಾಳ ಗ್ರಾಮಕ್ಕೆ ಹೋದ ಮರು ವರ್ಷದಲ್ಲಿ ಏಕೆ ಬೆಲವಂತನಕೊಪ್ಪ ಗ್ರಾಮಕ್ಕೆ ವಾಪಸ್ಸು ಬಂದಿರುತ್ತಾರೆ ಅಂದರೆ ಸಾಕ್ಷಿ ನನ್ನ ತಂದೆಯ ಜೀವಕ್ಕೆ ದತ್ತಕ ತಾಯಿಯ ವಾರಸುದಾರರಿಂದ ಬೆದರಿಕೆ ಇದ್ದ ಕಾರಣ ನನ್ನ ತಂದೆ ಮತ್ತು ಅವರ ದತ್ತಕ ತಾಯಿ ಬೆಲವಂತನಕೊಪ್ಪ ಗ್ರಾಮಕ್ಕೆ ಬಂದಿರುತ್ತಾರೆ ಎನ್ನುತ್ತಾರೆ. ನಾನು ಹೇಳುವ ನನ್ನ ತಂದೆಯ ದತ್ತಕ ತಾಯಿ ಹನುಮಕ್ಕ ನಾಗಮ್ಮನ ತಾಯಿ ಅಂದರೆ ಸರಿ. 1 ನೇ ಪ್ರತಿವಾದಿ ಎಲಿವಾಳ ಗ್ರಾಮದಿಂದ ವಾಪಸ್ಸು ಬೆಲವಂತನಕೊಪ್ಪ ಗ್ರಾಮಕ್ಕೆ ಬಂದ ನಂತರ ಆತನ ಜನಕ ತಂದೆ–ತಾಯಿಯ ಮನೆಯಲ್ಲಿ ವಾಸ ಇದ್ದರಾ ಅಂದರೆ ಸಾಕ್ಷಿ ಪ್ರತ್ಯೇಕವಾಗಿ ದತ್ತು ತಾಯಿಯ ಜೊತೆ ವಾಸ ಇದ್ದರು ಎನ್ನುತ್ತಾರೆ. 1 ನೇ ಪ್ರತಿವಾದಿ ಮತ್ತು ಆತನ ದತ್ತಕ ತಾಯಿ ಪ್ರತ್ಯೇಕವಾಗಿ ವಾಸ ಇರಲು ಊಟ–ವಸತಿ ಯಾರು ನೀಡಿರುತ್ತಾರೆ ಅಂದರೆ ಸಾಕ್ಷಿ 1 ನೇ ಪ್ರತಿವಾದಿಯ ದತ್ತಕ ತಾಯಿಯ ತವರು ಮನೆಯಿಂದ ತಂದ ಆದಾಯದಿಂದ ಗುಡಿಸಲು ಹಾಕಿಕೊಂಡು ಪ್ರತ್ಯೇಕವಾಗಿ ಇದ್ದರು ಎನ್ನುತ್ತಾರೆ. 1 ನೇ ಪ್ರತಿವಾದಿ ಮತ್ತು ಅವರ ದತ್ತಕ ತಾಯಿ ಎಂದು ಹೇಳುವ ಹನುಮಕ್ಕರವರು ಪಟೇಲ್ ಹನುಮಂತಪ್ಪನ ಖಾನೆಶಮರಿ ಜಾಗದಲ್ಲಿ ವಾಸ ಇದ್ದರು ಅಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುವುದೇನೆಂದರೆ ಖಾನೆಶಮರಿ ನಂ.5 ರ ಚಾವಡಿ ಜಾಗದಲ್ಲಿ ವಾಸ ಇದ್ದರು. ಖಾನೆಶಮರಿ ನಂ.5 ಇದು ಪಟೇಲ್ ಹನುಮಂತಪ್ಪನವರಿಗೆ ಸೇರಿದ ಸ್ವತ್ತು ಅಂದರೆ ಸರಿಯಲ್ಲ. ಹನುಮಕ್ಕಳಿಗೆ 9 ಜನ ಮಕ್ಕಳು ಇರುತ್ತಾರೆ ಅಂದರೆ ಸುಳ್ಳು. ಹನುಮಕ್ಕ ಯಾವಾಗ ಮರಣ ಹೊಂದಿರುತ್ತಾರೆ ಅಂದರೆ ಸಾಕ್ಷಿ 1969 ನೇ ಇಸವಿಯಲ್ಲಿ ಎನ್ನುತ್ತಾರೆ. ನಿಮ್ಮ ಜನ್ಮ

ದಿನಾಂಕ ಯಾವುದು ಅಂದರೆ ಸಾಕ್ಷಿ 12.08.1976 ಎನ್ನುತ್ತಾರೆ. ನಿಮಗೆ ಪ್ರಾಪಂಚಿಕ ಜ್ಞಾನ ಯಾವಾಗ ಬಂದಿರುತ್ತದೆ ಅಂದರೆ ಸಾಕ್ಷಿ 15–16 ವಯಸ್ಸದವನಿದ್ದಾಗ ಬಂದಿರುತ್ತದೆ ಎನ್ನುತ್ತಾರೆ.
ಮುಂದುವರೆದ ಪಾಟಿ ಸವಾಲಿಗೆ ಸಮಯ ನೀಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ
ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.